ಹುಡುಕುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕು.. ಹೇಗಾದರೂ ಮಾಡಿ ಹೇಮಾವತಿಯ ವಿಳಾಸವನ್ನು ತಿಳಿದುಕೊಂಡು ಅವಳನ್ನು ಭೇಟಿ ಮಾಡಿ ನಾನು ನನ್ನ ಹೆಂಡತಿಯೊಂದಿಗೆ ಸುಖವಾಗಿದ್ದೇನೆ.. ನನ್ನ ಹೆಂಡತಿ ದೇವತೆಯಂತವಳು.. ನನ್ನ ಹಾಲಿನಂತಹ ಸಂಸಾರದಲ್ಲಿ ಹುಳಿ ಹಿಂಡುವ ಕೆಲಸವನ್ನು ದಯವಿಟ್ಟು ಮಾಡಬೇಡ ಎಂದು ವಿನಂತಿಸಿಕೊಳ್ಳಬೇಕು.. ಅವಳ ನಿಜವಾದ ಉದ್ದೇಶವಾದರೂ ಏನು ಎಂಬುದನ್ನು ತಿಳಿದುಕೊಂಡು ಈ ಅನಿರೀಕ್ಷಿತ ಸಮಸ್ಯೆಗೆ ಹೇಗಾದರೂ ಒಂದು ಸೂಕ್ತ ಪರಿಹಾರವನ್ನು ಕಂಡುಕೊಳ್ಳಬೇಕು ಎಂದು ನಿರ್ಧರಿಸಿದ ಮೇಲೆ ನನ್ನ ಮನಸ್ಸಿಗೆ ಸಮಾಧಾನವಾಯಿತು. ನಿಧಾನವಾಗಿ ನಾನು ನಿದ್ರೆಗೆ ಜಾರಿದೆ.

ಮರುದಿನ ಬೆಳಿಗ್ಗೆ ಎದ್ದು ಸಿದ್ಧನಾಗಿ ಕಾರ್ಖಾನೆಗೆ ಹೊರಟೆ. ಜೇಬಿನಲ್ಲಿದ್ದ ನನ್ನ ವೈಯುಕ್ತಿಕ ಮೊಬೈಲ್ ಫೋನಿಗೆ ಮೆಸೇಜೊಂದು ಬಂದು ಬಿದ್ದ ಸದ್ದಾಯಿತು. ತೆಗೆದು ನೋಡಿದೆ. ಹೇ ಸುನಿಲ್.. ಆರ್ ಯೂ ಬ್ಯುಸಿ..? ಪ್ಲೀಸ್ ಕಾಲ್ ಮಿ ವ್ಹೆನ್ ಯು ಆರ್ ಫ್ರೀ.. ಹಿಂದಿನ ರಾತ್ರಿ ಕರೆ ಮಾಡಿದ್ದ ನನ್ನ ಸ್ನೇಹಿತ ಸುಬ್ರಹ್ಮಣ್ಣ ಮೆಸೇಜಿಸಿದ್ದ. ತಲೆಯ ತುಂಬಾ ಹೇಮಾವತಿ ಮತ್ತು ಗಿರಿಧರ ಇಬ್ಬರೂ ತುಂಬಿಕೊಂಡಿದ್ದರು. ಸುಬ್ರಹ್ಮಣ್ಯನಿಗೆ ಕಾಲ್ ಮಾಡುವ ಮನಸಾಗಲಿಲ್ಲ. ಕಾರು ಹತ್ತಿದವನು ಕಾರ್ಖಾನೆಯನ್ನು ಹೇಗೆ ತಲುಪಿದೆನೆಂದು ನನಗೇ ತಿಳಿಯಲಿಲ್ಲ. ನನ್ನ ಕುರ್ಚಿಯಲ್ಲಿ ಕುಳಿತು ಮಾಡಬೇಕಾದ ಕೆಲವೊಂದು ಮುಖ್ಯ ಕೆಲಸಗಳನ್ನು ಮಾಡಿ ಮುಗಿಸಿದೆ. ಕೆಲಸದ ಕಡೆ ಸಂಪೂರ್ಣವಾಗಿ ನನ್ನನ್ನು ತೊಡಗಿಸಿಕೊಳ್ಳಲು ಆಗುತ್ತಿಲ್ಲ ಎಂಬುದು ನನ್ನ ಅರಿವಿಗೆ ಬಂದು ಮನಸ್ಸಿಗೆ ತುಸು ಕಸಿವಿಸಿಯಾಯಿತು.

ಹೇಗೋ ಅರ್ಧ ದಿನ ಕಳೆದೆ. ಮನಸ್ಸು ತಳಮಳಿಸುತಿತ್ತು. ಕೆಲಸದ ಮೇಲೆ ಮನಸ್ಸನ್ನು ಕೇಂದ್ರೀಕರಿಸುವುದು ಸಾಧ್ಯವಿಲ್ಲದಾಯಿತು. ಕುರ್ಚಿಯಲ್ಲಿ ಕುಳಿತು ಎದುರಿಗಿದ್ದ ಕಂಪ್ಯೂಟರಿನಲ್ಲಿ ಆರೋಗ್ಯ ಸರಿಯಿಲ್ಲವೆಂಬ ಕಾರಣ ನೀಡಿದ ಅರ್ಧದಿನ ರಜೆಯ ಬೇಡಿಕೆಯನ್ನು ಟೈಪು ಮಾಡಿ ಉಳಿದ ಕಾರ್ಯಭಾರವನ್ನು ನಮ್ಮ ವ್ಯವಸ್ಥಾಪಕರಿಗೆ ವಹಿಸಿ ಸೀದಾ ಪ್ರಧಾನ ವ್ಯವಸ್ಥಾಪಕರ ಕೊಠಡಿಗೆ ತೆರಳಿದೆ. ಇಂದಿನವರೆಗೂ ಎಂದೂ ವಿನಾಕಾರಣ ನಾನು ರಜೆ ಪಡೆದಿಲ್ಲ. ನನ್ನ ಬಗ್ಗೆ ನಮ್ಮ ಪ್ರಧಾನ ವ್ಯವಸ್ಥಾಪಕರಿಗೆ ಕಾರ್ಖಾನೆಯ ಒಬ್ಬ ನಿಷ್ಠಾವಂತ ಯುವ ಅಧಿಕಾರಿ ಎಂಬ ಗೌರವಯುತ ಭಾವನೆಯಂತೂ ಇದೆ. 'ಎನಿ ಥಿಂಗ್ ಸೀರಿಯಸ್ ಸುನಿಲ್..' ಎಂದು ಕಾಳಜಿ ತೋರಿದರು. 'ನೋ ಸಾರ್.. ನಥಿಂಗ್.. ಜಸ್ಟ್ ಎ ಸ್ಮಾಲ್ ಹೆಡ್ ಏಕ್.. ' ಎಂದು ವಿನಯ ಪ್ರದರ್ಶಿಸಿದೆ. 'ಓಕೆ ಕ್ಯಾರಿ ಆನ್.. ಪ್ಲೀಸ್ ಟೇಕ್ ಕೇರ್..' ಎಂದು ರಜೆಯನ್ನು ಮಂಜೂರು ಮಾಡಿದರು.

ಕಾರ್ಖಾನೆಯಿಂದ ಹೊರಬಿದ್ದವನು ಕಾರನ್ನು ಸೀದಾ ಮೈಸೂರು ರಸ್ತೆಯ ಕಡೆಗೆ ನಡೆಸಿದೆ. ಮಧ್ಯಾಹ್ನದ ಸಮಯವಾಗಿದ್ದರಿಂದ ಅಷ್ಟೇನೂ ಸಂಚಾರ ದಟ್ಟಣೆಯಿರಲಿಲ್ಲ. ಏಂಜೆಲ್ಸ್ ಗಾರ್ಮೆಂಟ್ಸಿನ ಕಾಂಪೌಂಡಿನ ಬದಿಗೆ ಕಾರು ನಿಲ್ಲಿಸಿ ಪ್ರವೇಶ ದ್ವಾರದಲ್ಲಿದ್ದ ಭದ್ರತಾ ಸಿಬ್ಬಂದಿಗೆ ಸಾರ್ವಜನಿಕ ಸಂಪರ್ಕಾಧಿಕಾರಿಯವರನ್ನು ಕಾಣಬೇಕಿತ್ತು ಎಂದು ಹೇಳಿ ನನ್ನ ಕಾರ್ಖಾನೆಯ ವಿಸಿಟಿಂಗ್ ಕಾರ್ಡ್ ನೀಡಿದೆ. ಒಳಹೋದ ಭದ್ರತಾ ಸಿಬ್ಬಂದಿಯೊಬ್ಬರು ಕೆಲವೇ ಕ್ಷಣಗಳಲ್ಲಿ ವಾಪಾಸಾಗಿ 'ಸಾರ್.. ಒಳಗೆ ಬನ್ನಿ..' ಎಂದು ವಿನಯಪೂರ್ವಕವಾಗಿ ಸ್ವಾಗತಿಸಿ ನನ್ನನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಕೊಠಡಿ ತಲುಪಿಸಿದರು. ನನ್ನ ವಿಸಿಟಿಂಗ್ ಕಾರ್ಡ್ ನನಗೆ ಗೌರವವನ್ನು ತಂದುಕೊಟ್ಟಿತ್ತು. ಅಲ್ಲಿನ ಯುವ ಸಾರ್ವಜನಿಕ ಸಂಪರ್ಕಾಧಿಕಾರಿಯೂ ಕೂಡ ಎದ್ದು ನಿಂತು 'ಪ್ಲೀಸ್ ಕುಳಿತುಕೊಳ್ಳಿ ಸಾರ್..' ಎಂದು ಆದರಿಸಿದ. ಕುರ್ಚಿಯಲ್ಲಿ ಕುಳಿತೊಡನೆಯೇ ಇಲ್ಲಿ 'ಹೇಮಾವತಿ ಅಂತ ಒಬ್ಬರು ಕೆಲಸ ಮಾಡುತಿದ್ದಾರಲ್ಲ.. ಅವರನ್ನು ಸ್ವಲ್ಪ ಭೇಟಿಯಾಗಬೇಕಿತ್ತು.. ಅವರು ನನ್ನ ಪರಿಚಯದವರು..' ಎಂದು ವಿನಂತಿಸಿಕೊಂಡೆ. 'ಒನ್ ಮಿನಿಟ್ ಸಾರ್.. ' ಎಂದ ಅಧಿಕಾರಿ ಇಂಟರ್ ಕಾಮಿನಲ್ಲಿ ಸೆಕ್ಷನ್ ಸೂಪರ್ ವೈಸರ್ ಒಬ್ಬರಿಗೆ ಕರೆ ಮಾಡಿ ಕೊಠಡಿಗೆ ಬರುವಂತೆ ತಿಳಿಸಿದ. ಐದಾರು ನಿಮಿಷಗಳಲ್ಲಿ ಮಧ್ಯವಯಸ್ಸಿನ ಮಹಿಳೆಯೊಬ್ಬಳು ಬಂದಳು. ಅವಳಿಗೆ ನನ್ನನ್ನು ಪರಿಚಯಿಸಿದ ಪಿಆರ್‌ಓ ಹೇಮಾವತಿ ಅಂತ ಯಾವ ಸೆಕ್ಷನ್ನಿನಲ್ಲಿದ್ದಾರೆ.. ಎಂದು ಕೇಳಿದ. 'ಯಾವ ಹೇಮಾವತಿ..' ಎಂದು ಹುಬ್ಬೇರಿಸಿ ಪ್ರಶ್ನಿಸಿದ ಮಹಿಳೆಗೆ 'ನಾನು ಅವರು ಮಳವಳ್ಳಿಯವರು..' ಎಂದೆ. 'ಓ.. ಆ ಹೇಮಾವತಿಯಾ.. ಆ ಹುಡುಗಿ ಕೆಲಸ ಬಿಟ್ಟು ಬಹಳ ದಿನವಾಯಿತು ಸಾರ್.. ಆಮೇಲೆ ಅವಳು ಇಲ್ಲಿಗೆ ಒಂದು ದಿನವೂ ಬಂದಿಲ್ಲ..' ಎಂದು ಉತ್ತರಿಸಿದ್ದನ್ನು ಕಂಡು ನನಗೆ ಆಶ್ಚರ್ಯದ ಜೊತೆಗೆ ತುಸು ನಿರಾಸೆಯೂ ಆಯಿತು. ಅದನ್ನು ತೋರ್ಪಡಿಸಿಕೊಳ್ಳದೆ, 'ಅವರ ಅಡ್ರೆಸ್ಸು, ಫೋನು ನಂಬರ್ ಏನಾದರೂ ಸಿಗುತ್ತದಾ..' ಎಂದೆ. 'ಒಂದು ನಿಮಿಷ.. ಅವಳ ಕ್ಲೋಸ್ ಫ್ರೆಂಡ್ ಒಬ್ಬಳಿದಾಳೆ ಸೀತಾ ಅಂತ.. ವಿಚಾರಿಸುತ್ತೇನೆ..' ಎಂದ ಮಹಿಳೆ ಮತ್ತೆ ಒಳಗೆ ತೆರಳಿದಳು. ನನಗೆ ಏನಾದರೂ ಸುಳಿವು ಸಿಗಬಹುದೇನೋ ಎಂದು ಸ್ವಲ್ಪ ಸಮಾಧಾನವಾಯಿತು.

ಎದುರಿಗೆ ಕುಳಿತಿದ್ದ ಪಿಆರ್‌ಓ ನನ್ನ ಬಗ್ಗೆ, ನಮ್ಮ ಕಾರ್ಖಾನೆಯ ಬಗ್ಗೆ, ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮನುಷ್ಯರುಗಳ ಯಾಂತ್ರಿಕ ಬದುಕಿನ ಜಂಜಾಟಗಳ ಬಗ್ಗೆ ಲೋಕಾಭಿರಾಮವಾಗಿ ಒಂದೆರಡು ಮಾತನಾಡಿ 'ಸಾರ್ ಸ್ವಲ್ಪ ಟೀ..' ಎಂದು ಸೌಜನ್ಯದಿಂದ ಕೇಳಿದ. 'ಇಲ್ಲಾ.. ಈಗ ಇಲ್ಲಿಗೆ ಬರುವಾಗ ಕುಡಿದು ಬಂದೆ..' ಎಂದು ಮುಗುಳ್ನಕ್ಕು ನಯವಾಗಿ ಉತ್ತರಿಸುವಷ್ಟರಲ್ಲಿ ಒಳಗೆ ಹೋಗಿದ್ದ ಮಹಿಳೆ ವಿಳಾಸವೊಂದನ್ನು ಬರೆದಿದ್ದ ಒಂದು ಸಣ್ಣ ಚೀಟಿಯನ್ನು ತಂದು ನನ್ನ ಮುಂದೆ ಇಟ್ಟಳು. ಅದರ ಮೇಲೆ ಕಣ್ಣಾಡಿಸಿದವನು ಅವಳತ್ತ ತಿರುಗಿ ಥ್ಯಾಂಕ್ಸ್.. ತುಂಬಾ ಉಪಕಾರವಾಯಿತು.. ಎಂದು ಮಂದಹಾಸ ಬೀರಿದೆ. ಮಹಿಳೆಯೂ ಸೌಜನ್ಯದ ನಗೆ ಬೀರಿದಳು. ಕುಳಿತಲ್ಲಿಂದ ಎದ್ದು ಸಾರ್ವಜನಿಕ ಸಂಪರ್ಕಾಧಿಕಾರಿಗೆ ಧನ್ಯವಾದ ತಿಳಿಸಿ ಅವನ ಕೈಕುಲುಕಿ ನಿರ್ಗಮಿಸಿದೆ.

ಕಾರು ಹತ್ತುವ ಮುನ್ನ ಕೈಯ್ಯಲ್ಲಿದ್ದ ಚೀಟಿಯ ಮೇಲೊಮ್ಮೆ ಕಣ್ಣಾಡಿಸಿದೆ.

ನಂ 72, 9ನೇ ಮುಖ್ಯರಸ್ತೆ, ಬನಶಂಕರಿ ಎರಡನೇ ಹಂತ

ಫೋನು ನಂಬರ್ ಇರಲಿಲ್ಲ. ಸದ್ಯ ಹೇಮಾವತಿಯ ವಿಳಾಸವಾದರೂ ಸಿಕ್ಕಿತಲ್ಲ. ಅಷ್ಟೇ ಸಾಕು.. ಅವಳನ್ನು ಖುದ್ದಾಗಿಯೇ ಭೇಟಿ ಮಾಡಿ ಮಾತನಾಡಬೇಕು ಎಂದುಕೊಂಡು ಕಾರು ಹತ್ತಿದೆ. ಗಾರ್ಮೆಂಟ್ಸಿನ ಕೆಲಸ ಬಿಟ್ಟು ಬೇರೆ ಕೆಲಸಕ್ಕೆ ಸೇರಿರಬಹುದು.. ಅದಕ್ಕಾಗಿಯೇ ಕೆಂಗೇರಿಯಲ್ಲಿದ್ದ ಅವಳ ರೂಮನ್ನು ಬದಲಾಯಿಸಿರಬಹುದು.. ಎಂದೆನಿಸಿ ಕಾರನ್ನು ಬನಶಂಕರಿ ಎರಡನೇ ಹಂತದ ಕಡೆಗೆ ಹೋಗುವ ರಸ್ತೆಗೆ ತಿರುಗಿಸಿ, ಕಾರಿನ ಡ್ಯಾಶ್ ಬೋರ್ಡ್‌ನಲ್ಲಿದ್ದ ಡಿಜಿಟಲ್ ಗಡಿಯಾರದ ಕಡೆ ನೋಡಿದೆ. ಸಮಯ ಒಂದೂವರೆ ಗಂಟೆಯಾಗಿತ್ತು. ಈಗ ಹೋದರೆ ಹೇಮಾವತಿ ಕೆಲಸಕ್ಕೆ ಹೋಗಿರಬಹುದು.. ಸಂಜೆಯ ನಂತರ ಹೋಗುವುದು ಸೂಕ್ತವೆನಿಸಿತು. ಆದರೆ ನನಗೆ ಅಲ್ಲಿಯವರೆಗೂ ಸಮಯ ಕಳೆಯುವುದು ಹೇಗೆಂದು ತಿಳಿಯಲಿಲ್ಲ. ಮನೆಗೆ ಹೋಗಿ ವಾಪಾಸು ಬರುವ ಆಲೋಚನೆಯೊಂದು ಮನದಲ್ಲಿ ಸುಳಿಯಿತಾದರೂ ಮನಸ್ಸು ಅದನ್ನು ಸಂಪೂರ್ಣವಾಗಿ ಸಮ್ಮತಿಸಲಿಲ್ಲ. ಒಮ್ಮೆ ವಿಳಾಸದಲ್ಲಿರುವ ಅವಳ ಮನೆಯನ್ನಾದರೂ ನೋಡಿ ಸುತ್ತಮುತ್ತಲಿನ ಮನೆಯವರನ್ನು ವಿಚಾರಿಸಿ ಅವಳು ಅಲ್ಲಿದ್ದಾಳೆಂಬುದನ್ನು ದೃಢಪಡಿಸಿಕೊಳ್ಳೋಣ ಎಂದು ನಿಶ್ಚಯಿಸಿ ನಿಧಾನವಾಗಿ ಕಾರನ್ನು ನಡೆಸತೊಡಗಿದೆ.

ತೀವ್ರ ಸಂಚಾರ ದಟ್ಟಣೆಯಿದ್ದ ಬನಶಂಕರಿ ಎರಡನೇ ಹಂತದ ಮುಖ್ಯರಸ್ತೆಯ ಎಡಬದಿಯಲ್ಲಿ ಕಾರು ನಡೆಸಿಕೊಂಡು ಹೋಗುತಿದ್ದ ನನಗೆ ಎಡಭಾಗದಲ್ಲಿಯೇ 9ನೇ ಮುಖ್ಯರಸ್ತೆ ಎಂದು ಬಿಬಿಎಂಪಿಯವರು ಹಾಕಿದ್ದ ನೀಲಿ ಬಣ್ಣದ ತಗಡಿನ ಫಲಕ ಕಾಣಿಸಿ ಕಾರನ್ನು ಅತ್ತ ತಿರುಗಿಸಿ ಮನೆಯ ಸಂಖ್ಯೆಗಳನ್ನು ಎಣಿಸಿಕೊಂಡು ಮುಂದೆ ನಡೆದೆ. ಅದೊಂದು ನಲವತ್ತು ಅಡಿಯ ವಿಶಾಲವಾದ ರಸ್ತೆ. ಇಕ್ಕೆಲಗಳಲ್ಲಿಯೂ ಬರೀ ಮಹಡಿಯ ಮನೆಗಳು. ಮೇಲ್ಮಧ್ಯಮ ವರ್ಗದವರು ವಾಸಿಸುವ ಬಡಾವಣೆಯೆಂಬುದು ಕಣ್ನೋಟದಿಂದಲೇ ಖಚಿತವಾಯಿತು. ಇಂತಹ ಬಡಾವಣೆಯಲ್ಲಿ ಹೇಮಾವತಿ ಮನೆ ಮಾಡಿಕೊಂಡಿದ್ದಾಳೆಯೇ.. ಅಥವಾ ನನಗೆ ದೊರೆತಿರುವ ವಿಳಾಸ ತಪ್ಪಿದೆಯೇನೋ.. ಎನ್ನುವ ಸಂಶಯಗಳು ನನ್ನ ಮನದಲ್ಲಿ ಉದಯಿಸಿದವು. ಹೇಮಾವತಿ ಏನಾದರೂ ಅವಳ ಬಂಧುಗಳ ಮನೆಯೊಂದರಲ್ಲಿ ವಾಸ್ತವ್ಯ ಹೂಡಿರಬಹುದೇನೋ ಎನಿಸಿ ತುಸು ಸಮಾಧಾನವಾಯಿತು. ಮನೆಯ ಸಂಖ್ಯೆ 72 ಹತ್ತಿರವಾದಂತೆಲ್ಲಾ ಮನದಲ್ಲಿ ಯಾವುದೋ ಸಣ್ಣ ಆತಂಕ ಶುರುವಾಯಿತು.

ಆ ಮನೆಯ ಮುಂದೆ ಹಾದು ತುಸು ದೂರ ಹೋಗಿ ಕಾರು ನಿಲ್ಲಿಸಿ ಇಳಿದು, ವಾಪಾಸು ಬಂದು ಮನೆಯ ಮುಂದಿದ್ದ ದೊಡ್ಡ ಕಬ್ಬಿಣದ ಗೇಟಿನ ಮುಂದೆ ನಿಂತು ನೋಡಿದೆ. ಅದು ಸಾಧಾರಣ ಮನೆಯಲ್ಲ. ಅದೊಂದು ಭವ್ಯ ಬಂಗಲೆ. ಒಳಗೆ ಮುಂಬಾಗಿಲಿನ ಎದಿರು ನಿಂತಿದ್ದ ಒಂದು ಐಷಾರಾಮಿ ಕಾರು, ಮುಂದಿನ